Akashvani : Bangalore

National Bulletins In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

01.09.2025 19.35 pm

<><*<><>*><>

<u>ಮುಖ್ಯಾಂಶಗಳು</u>

- ದಿವ್ಯಾಂಗರ ಅಭಿವೃದ್ಧಿ ಹಾಗೂ ಸಮಾನ ಅವಕಾಶಕ್ಕೆ ಸರ್ಕಾರ ಬದ್ಧ - ರಾಷ್ಟ್ರಪತಿ ದ್ರೌಪದಿ ಮುರ್ಮು
- ಹಣಕಾಸು ಹಾಗೂ ಇತರ ಕ್ಷೇತ್ರಗಳಲ್ಲಿ ಸಹಕಾರ ಕುರಿತು ಪ್ರಧಾನಿ ನರೇಂದ್ರ ಮೋದಿ - ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟೀನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ
- ಪಾಟ್ನಾದಲ್ಲಿಂದು ಮತದಾರರ ಅಧಿಕಾರ ಯಾತ್ರೆ ಮುಕ್ತಾಯಗೊಳಿಸಿದ ರಾಹುಲ್ ಗಾಂಧಿ
- ಆಗಸ್ಟ್ ಅಂತ್ಯಕ್ಕೆ ೧ ಲಕ್ಷ ೮೬ ಸಾವಿರ ಕೋಟಿ ರೂಪಾಯಿ ಮೀರಿದ ಜಿಎಸ್‌ಟಿ ಸಂಗ್ರಹ

><><><><><><><><><

ಸರ್ಕಾರವು ವಿವಿಧ ಜನಪರ ಯೋಜನೆಗಳ ಮೂಲಕ ದಿವ್ಯಾಂಗ ಜನರು ಯಾವುದೇ ಅಡಚಣೆ ಇಲ್ಲದೆ ತಮ್ಮ ಜೀವನದಲ್ಲಿ ಮುಂದುವರಿಯುವಂತೆ ಅಡೆತಡೆಯಿಲ್ಲದ ವಾತಾವರಣ ನಿರ್ಮಿಸಲು ಪ್ರಯತ್ನಿಸುತ್ತಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು, ಮೈಸೂರಿನಲ್ಲಿಂದು ನಡೆದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ವಜ್ರ ಮಹೋತ್ಸವ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, 'ಸುಗಮ್ಯ ಭಾರತ ಅಭಿಯಾನ' ಅಡಿಯಲ್ಲಿ ದಿವ್ಯಾಂಗರಿಗೆ ಸಮಾನ ಅವಕಾಶ ಹಾಗೂ ಅಭಿವೃದ್ಧಿಗೆ ತಳಹದಿ ರೂಪಿಸಲು ಕ್ರಮ ಜರುಗುತ್ತಿದೆ. ಸಾರ್ವಜನಿಕ ಸ್ಥಳಗಳು, ಸೌಲಭ್ಯಗಳು ಮತ್ತು ಮಾಹಿತಿ ಮೂಲಗಳನ್ನು ದಿವ್ಯಾಂಗ ಸ್ನೇಹಿಯಾಗಿ ರೂಪಿಸುವ ಮೂಲಕ, ನಾವು ಅವರಿಗೆ ಅನುಕೂಲತೆ ಮಾತ್ರವಲ್ಲದೆ, ಸಮಾಜವು ಅವರ ಬಗ್ಗೆ ಕಾಳಜಿ ಹೊಂದಿದೆ ಎಂಬ ಭಾವನೆ ಕೂಡ ನೀಡುತ್ತೇವೆ ಎಂದು ರಾಷ್ಟ್ರಪತಿ ಹೇಳಿದರು. ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಮಹಿಳೆಯರೇ ನೇತೃತ್ವ ವಹಿಸಿರುವುದು ಶ್ಲಾಘನೀಯ ಎಂದು ಹೇಳಿದರು.

ಧ್ವನಿ: ರಾಷ್ಟ್ರಪತಿ ದ್ರೌಪದಿ ಮುರ್ಮು(೩೦ ಸೆಕೆಂಡುಗಳು)

ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಗೆ ಜಯಚಾಮರಾಜೇಂದ್ರ ಒಡೆಯರ್ ಭೂಮಿ ನೀಡಿರುವುದು ಹೆಮ್ಮೆಯ ವಿಚಾರ. ದೇಶ-ವಿದೇಶಗಳಲ್ಲಿ ಈ ಸಂಸ್ಥೆ ಮಾದರಿಯಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು,

><><><><><><><><><

ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಇಂದು ಆರ್ಥಿಕ, ಹಣಕಾಸು ಮತ್ತು ಇತರ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರದ ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು. ಚೀನಾದ ಟಿಯಾಂಜಿನ್‌ನಲ್ಲಿ ನಡೆಯುತ್ತಿರುವ ಎಸ್‌ಸಿಒ ಶೃಂಗಸಭೆಯ ಸಂದರ್ಭದಲ್ಲಿ ಮಾತುಕತೆ ನಡೆಸಿದ ಅವರು, ಈ ಕ್ಷೇತ್ರಗಳಲ್ಲಿ ಉಭಯ ರಾಷ್ಟ್ರಗಳ ಸಂಬಂಧಗಳ ನಿರಂತರ ಪ್ರಗತಿಗೆ ತೃಪ್ತಿ ವ್ಯಕ್ತಪಡಿಸಿದರು. ಈ ವೇಳೆ, ಉಕ್ರೇನ್‌ನ್ನು ಒಳಗೊಂಡಂತೆ ಪ್ರಾದೇಶಿಕ ಹಾಗೂ ಜಾಗತಿಕ ವಿಷಯಗಳ ಬಗ್ಗೆ ಚರ್ಚೆ ನಡೆಯಿತು. ಉಕ್ರೇನ್‌ನಲ್ಲಿ ಇತ್ತೀಚಿನ ಶಾಂತಿ ಪ್ರಯತ್ನಗಳಿಗೆ ತಮ್ಮ ಬೆಂಬಲವನ್ನು ಪುನರುಚ್ಚರಿಸಿದ ಪ್ರಧಾನಿ ಮೋದಿ, ಸಂಘರ್ಷ ತ್ವರಿತವಾಗಿ ನಿಲ್ಲಿಸಿ, ಸ್ಥಿರ ಶಾಂತಿ ಪರಿಹಾರಕ್ಕೆ ದಾರಿ ಹುಡುಕುವ ಅಗತ್ಯವಿದೆ ಎಂದು ಹೇಳಿದರು.

ಸಹಭಾಗಿತ್ವವನ್ನು" ಇನ್ನಷ್ಟು ಬಲಪಡಿಸಲು ಬದ್ಧತೆ ವ್ಯಕ್ತಪಡಿಸಿದರು. ಪ್ರಧಾನಿ ಮೋದಿ, ರಷ್ಯಾದ ಅಧ್ಯಕ್ಷ ಪುಟಿನ್ ಅವರನ್ನು

ಈ ವರ್ಷದಲ್ಲಿ ಭಾರತದಲ್ಲಿ ನಡೆಯಲಿರುವ ೨೩ನೇ ವಾರ್ಷಿಕ ಶೃಂಗಸಭೆಗೆ ಆಹ್ವಾನಿಸಿದ್ದು, ಅವರ ಆಗಮನವನ್ನು ನಿರೀಕ್ಷಿಸುತ್ತಿರುವುದಾಗಿ ತಿಳಿಸಿದರು. "ಭಾರತ ಮತ್ತು ರಷ್ಯಾ ಕಠಿಣ ಸಮಯಗಳಲ್ಲಿ ಪರಸ್ಪರ ಜೊತೆಯಾಗಿ ನಿಂತಿವೆ. ಈ ದೇಶಗಳ ನಡುವಿನ ಹತ್ತಿರದ ಸಹಕಾರವು ಜಗತ್ತಿನ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಗೆ ಸಹಕಾರಿಯಾಗಿದೆ ಎಂದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ(  ೩೧ ಸೆಕೆಂಡುಗಳು)

><><><><><><><><><

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಇಂದು ಪಾಟ್ನಾದಲ್ಲಿ ತಮ್ಮ ಮತದಾರರ ಅಧಿಕಾರ ಯಾತ್ರೆಯನ್ನು ಮುಕ್ತಾಯಗೊಳಿಸಿದರು. ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ವಿರುದ್ಧದ ತಮ್ಮ ಅಭಿಯಾನವನ್ನು ಕಳೆದ ತಿಂಗಳು ೧೭ ರಂದು ರೋಹ್ತಾಸ್ ಜಿಲ್ಲೆಯ ಸಸಾರಾಮ್‌ನಿಂದ ಅವರು ಪ್ರಾರಂಭಿಸಿದ ಮತದಾರರ ಅಧಿಕಾರ ಯಾತ್ರೆಯಲ್ಲಿ ಭಾರತ ಒಕ್ಕೂಟದ ಹಲವಾರು ನಾಯಕರು ಭಾಗವಹಿಸಿದ್ದರು. ಇಂದು ಪಾಟ್ನಾದಲ್ಲಿ ಬೃಹತ್ ರೋಡ್‌ಶೋನೊಂದಿಗೆ ಅಭಿಯಾನ ಮುಕ್ತಾಯವಾಯಿತು. ಕಾರ್ಯಕ್ರಮಕ್ಕೆ ಪ್ರತಿಕ್ರಿಯಿಸಿದ ಹಿರಿಯ ಬಿಜೆಪಿ ನಾಯಕ ಮತ್ತು ಉಪಮುಖ್ಯಮಂತ್ರಿ ವಿಜಯ್ ಕುಮಾರ್ ಸಿನ್ಹಾ ಅವರು ಯಾತ್ರೆಯನ್ನು, ಮತ ರಕ್ಷಣೆಯ ಹೆಸರಿನಲ್ಲಿ ಕಣ್ಣೊರೆಸುವ ತಂತ್ರ ಎಂದು ತಳ್ಳಿಹಾಕಿದರು.

><><><><><><><><><

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ಆಗಸ್ಟ್‌ನಲ್ಲಿ ಭಾರತದ ಸರಕು ಮತ್ತು ಸೇವಾ ತೆರಿಗೆ -ಜಿಎಸ್‌ಟಿ ಸಂಗ್ರಹವು ಶೇಕಡಾ ೬.೫ ರಷ್ಟು ಹೆಚ್ಚಾಗಿ ಒಂದು ಲಕ್ಷ ೮೬ ಸಾವಿರ ಕೋಟಿ ರೂಪಾಯಿಗಳನ್ನು ಮೀರಿದೆ.  ಕೇಂದ್ರ ಹಣಕಾಸು ಸಚಿವಾಲಯದ ಪ್ರಕಾರ, ಒಟ್ಟು ದೇಶೀಯ ಆದಾಯವು ಸುಮಾರು ಒಂದು ಲಕ್ಷ ೩೭ ಸಾವಿರ ಕೋಟಿ ರೂಪಾಯಿಗಳನ್ನು ದಾಖಲಿಸಿದ್ದರೆ, ಒಟ್ಟು ಆಮದು ಆದಾಯವು ೪೯ ಸಾವಿರ ಕೋಟಿ ರೂಪಾಯಿಗಳನ್ನು ಮೀರಿದೆ. ನಿವ್ವಳ ಜಿಎಸ್‌ಟಿ ಸಂಗ್ರಹವು ಶೇಕಡಾ ೧೦.೭ ರಷ್ಟು ಹೆಚ್ಚಾಗಿ ಒಂದು ಲಕ್ಷ ೬೬ ಸಾವಿರ ಕೋಟಿ ರೂಪಾಯಿಗಳಿಗೆ ತಲುಪಿದೆ.

><><><><><><><><><

ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಇಂದು ಅಫ್ಘಾನಿಸ್ತಾನದ ವಿದೇಶಾಂಗ ಸಚಿವ ಮೌಲವಿ ಅಮೀರ್ ಖಾನ್ ಮುತ್ತಕಿ ಅವರೊಂದಿಗೆ ಮಾತನಾಡಿ, ಅಫ್ಘಾನಿಸ್ತಾನದಲ್ಲಿ ಸಂಭವಿಸಿದ ಭೂಕಂಪದಲ್ಲಿ ಮೃತಪಟ್ಟವರಿಗೆ ಸಂತಾಪ ಸೂಚಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಡಾ. ಜೈಶಂಕರ್ ಅವರು, ಭಾರತ ಇಂದು ಕಾಬೂಲ್‌ನಲ್ಲಿ ಒಂದು ಸಾವಿರ ಕುಟುಂಬಗಳಿಗೆ ಟೆಂಟ್‌ಗಳನ್ನು ತಲುಪಿಸಿದೆ. ಭಾರತೀಯ ಮಿಷನ್ ಕಾಬೂಲ್‌ನಿಂದ ಕುನಾರ್‌ಗೆ ೧೫ ಟನ್ ಅಗತ್ಯ ವಸ್ತುಗಳ ನೆರವು ಕಳುಹಿಸಿದ್ದು ನಾಳೆಯಿಂದ ಭಾರತದಿಂದ ಮತ್ತಷ್ಟು ಪರಿಹಾರ ಸಾಮಗ್ರಿಗಳನ್ನು ಕಳುಹಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

><><><><><><><><><

೨೦೦೧ರ ಸೆಪ್ಟೆಂಬರ್ ೧, ರಂದು ಪ್ರಾರಂಭವಾದ ಆಕಾಶವಾಣಿಯ FM ಗೋಲ್ಡ್ ಇಂದು ತನ್ನ ೨೪ನೇ ವಾರ್ಷಿಕೋತ್ಸವವನ್ನು ಆಚರಿಸಿಕೊಳ್ಳುತ್ತಿದೆ.  ಮೂಲತಃ AIR FM-II ಎಂದು ಕರೆಯಲ್ಪಡುತ್ತಿದ್ದ ಈ ಚಾನೆಲ್ ಅನ್ನು ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ೨೪/೭ ಸುದ್ದಿ ಮತ್ತು ಮನರಂಜನಾ ವೇದಿಕೆಯಾಗಿ ಪರಿಚಯಿಸಿತು. ಪ್ರಸಾರ ಭಾರತಿಯ ಆಕಾಶವಾಣಿಯಿಂದ ನಡೆಸಲ್ಪಡುವ FM ಗೋಲ್ಡ್, ಸುದ್ದಿ, ಪ್ರಚಲಿತ ವಿದ್ಯಮಾನಗಳು ಮತ್ತು ಮನರಂಜನೆಯ ಮಿಶ್ರಣವನ್ನು ಪ್ರಸಾರ ಮಾಡುತ್ತದೆ, ತನ್ನ ವಿಶಿಷ್ಟ ಕಾರ್ಯಕ್ರಮಗಳೊಂದಿಗೆ ಪ್ರೇಕ್ಷಕರನ್ನು ರಂಜಿಸುತ್ತಿದೆ. ಇದರ ಕೆಲವು ಜನಪ್ರಿಯ ಕಾರ್ಯಕ್ರಮಗಳಲ್ಲಿ ಸುರ್ಖಿಯೋನ್ ಮೇ, ಸ್ಪಾಟ್‌ಲೈಟ್ ಮತ್ತು ಮನಿ ಮ್ಯಾಟರ್ಸ್ ಸೇರಿವೆ.  ಕೋವಿಡ್ ೧೯

ಸಾಂಕ್ರಾಮಿಕ ಸಮಯದಲ್ಲಿ ಆರೋಗ್ಯ ಸಂಬಂಧಿತ ಕಾರ್ಯಕ್ರಮಗಳನ್ನು ಆಯೋಜಿಸುವುದು ಮತ್ತು ಸಾರ್ವಜನಿಕರಿಗೆ ಶಿಕ್ಷಣ ನೀಡುವುದು ಸೇರಿದಂತೆ ಈ ವೇದಿಕೆಯು ಮಹತ್ವದ ಪಾತ್ರ ವಹಿಸಿತ್ತು.

><><><><><><><><

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಜಮ್ಮುವಿನ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದರು. ತಾವಿ ಸೇತುವೆಯಲ್ಲಿ ಪ್ರವಾಹದಿಂದ ಉಂಟಾದ ಹಾನಿಯನ್ನು ಅಮಿತ್ ಶಾ ಪರಿಶೀಲಿಸಿದರು. ಇತ್ತೀಚಿನ ಪ್ರವಾಹದಿಂದ ಹೆಚ್ಚು ಹಾನಿಗೊಳಗಾದ ಚಕ್ ಮಾಂಗು ಗ್ರಾಮಕ್ಕೂ ಅವರು ಭೇಟಿ ನೀಡಿದರು. ವಿಪತ್ತು ನಿರ್ವಹಣಾ ಪಡೆಗಳು ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ಪೂರ್ಣ ಪ್ರಮಾಣದಲ್ಲಿ ನಡೆಸುತ್ತಿವೆ ಮತ್ತು ಸಂತ್ರಸ್ತರಿಗೆ ವೈದ್ಯಕೀಯ ಆರೈಕೆಯಲ್ಲಿ ಸಹಾಯವನ್ನು ನೀಡುತ್ತಿವೆ. ನರೇಂದ್ರ ಮೋದಿ ಸರ್ಕಾರವು ಸಂತ್ರಸ್ತ ಜನರೊಂದಿಗೆ ದೃಢವಾಗಿ ನಿಂತಿದೆ ಮತ್ತು ಸಂತ್ರಸ್ತ ಜನರ ಪುನರ್ವಸತಿಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಲು ಬದ್ಧವಾಗಿದೆ ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

><><><><><><><><

ಜೈವಿಕ ತಂತ್ರಜ್ಞಾನವು ದೇಶದ ಪ್ರತಿಯೊಂದು ವಲಯವನ್ನು ತಲುಪಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ನವದೆಹಲಿಯಲ್ಲಿಂದು ನಡೆದ ಹೆಚ್ಚಿನ ಕಾರ್ಯಕ್ಷಮತೆಯುಳ್ಳ ಬಯೋಟೆಕ್ನಾಲಜಿ ವೇದಿಕೆ ಉದ್ಘಾಟಿಸಿ ಮಾತನಾಡಿದ ಅವರು ಇದು ಜಾಗತಿಕ ಜೈವಿಕ ತಂತ್ರಜ್ಞಾನ ಶಕ್ತಿ ಕೇಂದ್ರವಾಗುವ ಭಾರತದ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದ್ದಾರೆ. ದೇಶದಲ್ಲಿ ಜೈವಿಕ ಆರ್ಥಿಕತೆಯು ೨೦೧೪ ರಲ್ಲಿ ಕೇವಲ ಹತ್ತು ಶತಕೋಟಿ ಡಾಲರ್‌ಗಳಿದ್ದು ೨೦೨೪ ರಲ್ಲಿ ೧೬೫ ಶತಕೋಟಿ ಡಾಲರ್‌ಗಳಿಗೆ ಏರಿದೆ. ೨೦೩೦ ರ ವೇಳೆಗೆ ೩೦೦ ಶತಕೋಟಿ ಡಾಲರ್ ಜೈವಿಕ ಆರ್ಥಿಕತೆಯ ಗುರಿ ಸಾಧಿಸುವತ್ತ ಕೇಂದ್ರ ಸರ್ಕಾರ ಕಾರ್ಯನಿರ್ವಹಿಸುತ್ತಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

><><><><><><><><

ಶಿಕ್ಷಣ ವ್ಯವಸ್ಥೆಯಲ್ಲಿ ಡಿಜಿಟಲೀಕರಣದ ಏಕೀಕರಣ ಮತ್ತು ಕೃತಕ ಬುದ್ಧಿಮತ್ತೆಯ ಪರಿಚಯದ ಅಗತ್ಯವನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಪ್ರತಿಪಾದಿಸಿದ್ದಾರೆ. ನವದೆಹಲಿಯಲ್ಲಿ ಇಂದು ನಡೆದ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ ೬೫ ನೇ ಸಂಸ್ಥಾಪನಾ ದಿನಾಚರಣೆಯನ್ನುದ್ದೇಶಿಸಿ ಮಾತನಾಡಿದ ಅವರು ಭಾರತದ ಶಿಕ್ಷಣ ಕ್ಷೇತ್ರದ ಪ್ರಗತಿಯಲ್ಲಿ ಎನ್‌ಸಿಇಆರ್‌ಟಿ ಪಾತ್ರವನ್ನು ಶ್ಲಾಘಿಸಿದ್ದಾರೆ. ಇದೇ ವೇಳೆ ಪ್ರಧಾನ್ PM eVidya ಮೊಬೈಲ್ ಅಪ್ಲಿಕೇಶನ್, DIKSHA 2.0 ಜೊತೆಗೆ ದೇಶಾದ್ಯಂತ ಶಿಕ್ಷಣದ ಗುಣಮಟ್ಟ ಮತ್ತು ಪಠ್ಯಕ್ರಮ ಅಭಿವೃದ್ಧಿಯನ್ನು ಹೆಚ್ಚಿಸುವಲ್ಲಿ ವಿವಿಧ ಉಪಕ್ರಮಗಳನ್ನು ಬಿಡುಗಡೆ ಮಾಡಿದರು.

><><><><><><><><